# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**BRUHAT BANGALORE MAHANAGARA PALIKE**

ಆಯುಕ್ತರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು– 02

ಸಂಖ್ಯೆ:.ಸ.ಆ(ಜಾ)ಪಿಆರ್/83/09–10 ದಿನಾಂಕ:

## ಏಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಮೂರು ಮೇಲುಸೇತುವೆಯಲ್ಲಿ ಜಾಹೀರಾತು ಪ್ರದರ್ಶಿಸಲು ಅನುಮತಿ ನೀಡಿದ್ದ ಕರಾರು ಪತ್ರವನ್ನು ರದ್ದುಪಡಿಸಿ ಮೆ॥ ಓ.ಡಿ.ಎಂ. ಮೀಡಿಯಾ ಸರ್ವೀಸಸ್ ಇಂಡಿಯಾ ಪ್ರೈ.ಲಿ., ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸುವ ಬಗ್ಗೆ.**

**ಉಲ್ಲೇಖ: 1) ಕರಾರು ಪತ್ರದ ದಿನಾಂಕ:13.01.2010**

**2) ಈ ಕಛೇರಿಯ ನೋಟೀಸ್ ದಿನಾಂಕ: 20.04.2012, 03.09.2012 ಹಾಗೂ 18.12.2012**

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಓ.ಡಿ.ಎಂ. ಮೀಡಿಯಾ ಸರ್ವೀಸಸ್ ಇಂಡಿಯಾ ಪ್ರೈ.ಲಿ., ಸಂಸ್ಥೆರವರಿಗೆ 1) ನ್ಯಾಷನಲ್ ಕಾಲೇಜ್ ಮೇಲುಸೇತುವೆ ಮೇಲೆ 31 ಸಂಖ್ಯೆಯ ಕಿಯಾಸ್ಕ್ 3x4x2 ಕಡೆ ಮತ್ತು 28 ಸಂಖ್ಯೆ ಗ್ಲೋಸೈನ್ ಬಾಕ್ಸ್ 4x6x2 ಕಡೆ 2) ರಿಚ್‌ಮಂಡ್ ಸರ್ಕಲ್ ಮೇಲುಸೇತುವೆ ಮೇಲೆ 2 ಸಂಖ್ಯೆಯ ಜಾಹೀರಾತು ಪ್ಯಾನಲ್ 100x6x2 ಕಡೆ ಮತ್ತು 81 ಸಂಖ್ಯೆಯ ಕಿಯಾಸ್ಕ್ 3x4x2 ಕಡೆ 3) ಸಿರ್ಸಿ ಸರ್ಕಲ್ ಮೇಲು ಸೇತುವೆಗಳಲ್ಲಿ 76 ಸಂಖ್ಯೆಯ ಕಿಯಾಸ್ಕ್ 3x4x2 ಕಡೆ ಅಡಿ ಅಳತೆಯಲ್ಲಿ ಜಾಹೀರಾತು ಪ್ರದರ್ಶಿಸಲು ದಿನಾಂಕ:13.01.2010 ರಂದು ಕರಾರು ಪತ್ರ ಮಾಡಿಕೊಂಡು ಕರಾರು ಪತ್ರದಂತೆ 60 ದಿನಗಳ ಕಾಲಾವಕಾಶ ನೀಡಿ ದಿನಾಂಕ:13.03.2010 ರಿಂದ 12.03.2013ರವರೆಗೆ ಮೂರು ವರ್ಷಗಳ ಅವಧಿಗೆ ಅನುಮತಿ ನೀಡಲಾಗಿರುತ್ತದೆ.

ಸದರಿ ಸಂಸ್ಥೆರವರಿಗೆ ಹಂಚಿಕೆಯಾಗಿದ್ದ ಮೂರು ಮೇಲುಸೇತುವೆಯಲ್ಲಿ ಟ್ರಾನ್ಸ್‌ಲೈಟ್ ಬಾಕ್ಸ್‌ಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶಿಸುತ್ತಿರುವುದಕ್ಕೆ ಲೈಸೆನ್ಸ್ ಶುಲ್ಕ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆಗಳು ಸೇರಿ ರೂ.1,55,12,311/–ಗಳನ್ನು ಪಾವತಿಸುವಂತೆ ಉಲ್ಲೇಖ (2) ರಲ್ಲಿ ಸೂಚಿಸಲಾಗಿತ್ತು. ಆದರೆ, ಸದರಿ ಸಂಸ್ಥೆಯವರು ಸದರಿ ಮೊತ್ತವನ್ನು ಪಾವತಿಸದೇ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ಸಂಖ್ಯೆ: 2969/2012ರಂತೆ ದಾವೆ ಹೂಡಿದ್ದು, ಈ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದ ದಿನಾಂಕ: 05.12.2012ರಲ್ಲಿ 15 ದಿವಸಗಳೊಳಗಾಗಿ ಅಂದರೆ ದಿನಾಂಕ:19.12.2012ರೊಳಗೆ ಸದರಿ ಮೊತ್ತವನ್ನು ಪಾವತಿಸುವಂತೆ ಸದರಿ ಸಂಸ್ಥೆಯವರಿಗೆ ನಿರ್ದೇಶನ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಸದರಿ ಮೊತ್ತವನ್ನು ಪಾವತಿಸುವಂತೆ ಸದರಿ ಸಂಸ್ಥೆಯವರಿಗೆ ದಿನಾಂಕ:18.12.2012ರಂದು ನೋಟೀಸ್ ಜಾರಿ ಮಾಡಿದ್ದರೂ ಸಹ ಸದರಿ ಸಂಸ್ಥೆಯವರು ಯಾವುದೇ ಮೊತ್ತವನ್ನು ಪಾವತಿಸಿರುವುದಿಲ್ಲ. ಆದುದರಿಂದ ಮೂರು ಮೇಲುಸೇತುವೆಗಳಲ್ಲಿ ಇವರು ಅಳವಡಿಸಿರುವ ಎಲ್ಲಾ ಕಿಯಾಸ್ಕ್‌ಗಳನ್ನು ತೆರವುಗೊಳಿಸಲಾಗಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೆ॥ ಓ.ಡಿ.ಎಂ. ಮೀಡಿಯಾ ಸರ್ವೀಸಸ್ ಇಂಡಿಯಾ ಪ್ರೈ.ಲಿ., ಸಂಸ್ಥೆರವರಿಗೆ 1) ನ್ಯಾಷನಲ್ ಕಾಲೇಜ್ 2) ರಿಚ್‌ಮಂಡ್ ಸರ್ಕಲ್ 3) ಸಿರ್ಸಿ ಸರ್ಕಲ್ ಈ ಮೂರು ಮೇಲುಸೇತುವೆಗಳಲ್ಲಿ ಕಿಯಾಸ್ಕ್‌ಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶಿಸುತ್ತಿದ್ದಕ್ಕೆ ಎಲ್ಲಾ ತೆರಿಗೆಗಳು ರೂ.1,55,12,311/-ಗಳನ್ನು ಪಾವತಿಸಬೇಕಾಗಿದ್ದು ಹಾಗೂ ಠೇವಣಿ ಇಟ್ಟಿರುವ ರೂ.5,00,000/-ಗಳನ್ನು ಮುಟ್ಟುಗೋಲು ಹಾಕಿಕೊಂಡು ಈ ಮೊತ್ತವನ್ನು ಕಳೆದು ಬಾಕಿ ಮೊತ್ತ ರೂ.1,50,12,311/-ಗಳನ್ನು ಪಾಲಿಕೆಗೆ ಪಾವತಿಸಬೇಕಾಗಿರುತ್ತದೆ.

ಈ ಮೊತ್ತವನ್ನು ಪಾವತಿಸದೇ ಇರುವುದರಿಂದ ಮೆ॥ ಓ.ಡಿ.ಎಂ. ಮೀಡಿಯಾ ಸರ್ವೀಸಸ್ ಇಂಡಿಯಾ ಪ್ರೈ.ಲಿ., ಸಂಸ್ಥೆಯನ್ನು ದಿನಾಂಕ:16.01.2013 ರಿಂದ ಜಾರಿಗೆ ಬರುವಂತೆ ಕಪ್ಪು ಪಟ್ಟಿಗೆ ಸೇರಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗೆ,
ಮೆ॥ ಓ.ಡಿ.ಎಂ. ಮೀಡಿಯಾ ಸರ್ವೀಸಸ್ ಇಂಡಿಯಾ ಪ್ರೈ.ಲಿ.,
ನಂ.705, 7ನೇ ಮಹಡಿ,
ಬರ್ಟನ್ ಸೆಂಟರ್,
ಎಂ.ಜಿ.ರಸ್ತೆ,
ಬೆಂಗಳೂರು-560 001